ಅವತಾರತ್ರಯ ಮಧ್ವ ಸುವ್ವಾಲಿ

॥ ಅವತಾರತ್ರಯ ಮಧ್ವ ಸುವ್ವಾಲಿ ॥

ಶ್ರೀರಮಣನಾದ ಶ್ರೀಹರಿಯ ಚರಣಕಮಲಕ್ಕೆರಗಿ
ಅರ್ಚಿಸುವ ಭಾರತೀಶನ ವರುಣರನ ಭಜಿಸುವೆ ॥ ಪ ॥

ಅಮರವರಿಯರೆಲ್ಲ ಕ್ಷೀರಾಬ್ಧಿಯಲ್ಲೀ ಮುಳುಗಿರಲು ।
ಕಮಲೆರೊಡನೆ ರಮಿಸುವಂಥ ಘನನ ಕಂಡರು ॥ ೧ ॥

ರಕ್ಷಿಸಯ್ಯ ಲಕ್ಷ್ಮೀಲೋಲ ರಕ್ಷಿಸಯ್ಯ ಭಕ್ತರ ಪಾಲ ।
ರಕ್ಷಿಸೆಂದು ಪಾಡಿದರು ಕುಕ್ಷಿಲೋಲನ ॥ ೨ ॥

ಮೀನನಾಗಿ ನಿಗಮಚೋರ ದಾನವರ ಗೆಲಿದು ಬಂದಿ ।
ದಾನ ಬೇಡಿದವಗೆ ವೇದಾಂತವಿದ್ಯವ ॥ ೩ ॥

ಮಂದರಾದ್ರಿ ಹಾಕಿ ಜಲಧಿ ಮಥಿಸುತಿರಲು ಕೂರ್ಮರೂಪ ।
ಅಂದು ಧರಿಸಿದಿ ಅಮೃತ ನಮಗೆ ತಂದು ನೀಡಿದಿ ॥ ೪ ॥

ವರಾಹನಾಗಿ ಹಿರಣ್ಯಾಕ್ಷನ ಮುಳುಗಿ ಪೋಗಿ ವಧೆಮಾಡಿ ।
ಧರಣಿ ಎತ್ತಿ ನಮ್ಮನ್ನ ಸಲಹಿದಾತನಲ್ಲವೆ ॥ ೫ ॥

ಮಗನ ಹಗೆಯು ಕೇಳಿ ದೈತ್ಯ ಮತ್ಸರವ ಮಾಡುತ್ತಿರಲು ನರ- ।
ಮೃಗ ರೂಪದಿಂದ ಮಗನ ಸಲಹಿದ ॥ ೬ ॥

ಇಂದ್ರನ್ನ ಲೋಕ ಬಲೀಂದ್ರ ಅಪಹರಿಸುತ್ತಿರಲು ಉ- ।
ಪೇಂದ್ರನಾಗಿ ತಂದ ಮದಸಾಂದ್ರನಲ್ಲವೆ ॥ ೭ ॥

ಎರಡುಹತ್ತು ಒಂದುಬಾರಿ ಧರಣಿನಾಯಕರ ಗೆಲಿದು ।
ಪರಶುರಾಮ ರೂಪವನ್ನು ಪ್ರಕಟಮಾಡಿದಿ ॥ ೮ ॥

ವೀರಕುಂಭಕರ್ಣ ರಾವಣೇಶ ಮುಖ್ಯ ಸಕಲರನ್ನೆಲ್ಲ ।
ಯಾಗ ತ್ಯಾಗದಿಂದ ರಾಹುತಿದ್ದನು ॥ ೯ ॥

ಮಧುರ ಪಟ್ಟಣಕ್ಕೆ ಹೋಗಿ ಮಾವಕಂಸನ್ನ ಕೊಂದು ।
ತಾಯಿತಂದೆಯರ ಬಂಧನವ ಬಿಡಿಸಿದಿ ॥ ೧೦ ॥

ಪ್ರೀತಿಯಿಂದ ಬರಲು ಅಪ್ರೀತಿಮಾಡಿದ ಸತಿಯರಿಗೆ ।
ಖ್ಯಾತನಾಗಿ ಮನಗೊಂಡು ಬೌದ್ಧನಾದನು ॥ ೧೧ ॥

ಕರುವ ಕಾಯಲು ಹೋಗಿ ತುರಗ ಏರಿಕೊಂಡು ।
ದುರುಳತನದಲ್ಲಿ ಮೆರೆದ್ಯೋ ನೀನು ಕಲ್ಕ್ಯರೂಪನೆ ॥ ೧೨ ॥

ಹೋಗಿ ಸುರರು ಮೊರೆಯಿಡಲು ಗರುಡಗಮನನಾದ ರಾಮ ।
ಹರುಷದಿಂದ ಭಾರತೀಶ ಹನುಮನಾದನು ॥ ೧೩ ॥

ತಾಯಿ ತಂದೆರ ಮಾತು ಒಪ್ಪಿಸುತಲೆ ದೇವ ಹೋಗಿ ।
ರಾಘವರ ಚರಣಕಮಲಗಳಿಗೆ ಎರಗಿದ ॥ ೧೪ ॥

ಮುದ್ರೆಯನ್ನು ಕೊಂಡು ಸಮುದ್ರವನ್ನೆ ದಾಟಿ ಹನುಮ ।
ಶೀಘ್ರದಿಂದ ಲಂಕಾಪಟ್ಟಣವ ಹೊಕ್ಕನು ॥ ೧೫ ॥

ಮಾರ್ಜಾಲರೂಪದಿಂದ ಮನೆಮನೆ ಹುಡುಕುತಿರಲು ।
ಸೀತೆಯಿದ್ದ ಸ್ಥಳವ ಎಲ್ಲ ಹುಡುಕುತಿದ್ದನು ॥ ೧೬ ॥

ಅಂತಃಪುರದ ಮನೆಯೊಳಗೆ ನಿಂತು ನೋಡಿದ ಹನುಮಂತ ।
ಮಂಚದಲ್ಲಿ ಮಂಡೋದರಿ ಮಲಗಿದ್ದಳು ॥ ೧೭ ॥

ಸೀತೆ ಎಂದು ಮನದಲ್ಲಿ ತಿಳಿದು ಬಹಳ ಕೋಪದಿಂದ ಹನುಮ ।
ಕಾಗೆರೇಖೆ ಕೋರೆದಾಡೆ ಅಸುರಿಯ ಕಂಡ ॥ ೧೮ ॥

ತಾಯಿ ಜಾನಕಿಗೆ ಪಾದದಲ್ಲಿ ಪದ್ಮರೇಖೆ ತಾಯಿ ।
ತಾಯಿ ಎಂದು ಹನುಮ ವನಕೆ ತೆರಳಿದ ॥ ೧೯ ॥

ಆಡಿದಮಾತಿಗೆ ಆರುಕೋಟಿ ಗೋದಾನ ।
ಮಾಡಿ ಹನುಮನು ತಾನು ವನಕೆ ತೆರಳಿದ ॥ ೨೦ ॥

ಅವತಾರತ್ರಯ ಮಧ್ವ ಸುವ್ವಾಲಿ

ಅಂದ ಮಾತಿಗೆ ಹತ್ತುಕೋಟಿ ಗೋದಾನ ।
ಮಾಡಿ ಹನುಮನು ತಾನು ವನಕೆ ತೆರಳಿದ ॥ ೨೧ ॥

ಮರದ ಕೆಳಗೆ ಸೀತೆ ಇರಲು ಕಂಡು ಹನುಮಂತ ।
ಅದೃಶ್ಯ ರೂಪದಿಂದ ಮರವನೇರಿದ ॥ ೨೨ ॥

ಹತ್ತು ತಲೆರಾವಣ ಮುತ್ತಿನ ಮಗುಟವನೆ ಇಟ್ಟು ।
ರತ್ನ ಪ್ರಭೆಯಿಂದ ಅಸುರ ಇಳಿದುಬಂದನು ॥ ೨೩ ॥

ವಿಸ್ತಾರದ ಮುತ್ತಿನ ಛತ್ತರಿಗೆ ಹಿಡಿದುಕೊಂಡು ।
ಸೀತೆಯಿದ್ದ ವನಕೆ ಬಂದು ಕಾಡುತಿದ್ದನು ॥ ೨೪ ॥

ಹಿಂಗನೋಡು ಜಾನಕಿ ಭೂಮಿಸಾಮ್ರಾಜ್ಯ ಕೊಡುವೆ ।
ಲಂಕಾಲಕ್ಷ್ಮಿ ನಿನಗೆ ಕೊಡುವೆನೆಂದನು ॥ ೨೫ ॥

ಇತ್ತ ನೋಡು ಜಾನಕಿ ಭೂಮಿಸಾಮ್ರಾಜ್ಯ ಕೊಡುವೆ ।
ಲಂಕಾಲಕ್ಷ್ಮಿ ನಿನಗೆ ಕೊಡುವೆನೆಂದನು ॥ ೨೬ ॥

ಆರುಕಾಲಿನ ಮಂಚಕ್ಕೆ ಹವಳದಾ ತಲೆದಿಂಬು ।
ಒರಗು ಬಾರಾ ಸೀತೆ ಎಂದು ಕರೆಯುತ್ತಿದ್ದನು ॥ ೨೭ ॥

ಹತ್ತುಕಾಲಿನ ಮಂಚಕ್ಕೆ ಮುತ್ತಿನಾ ತಲೆದಿಂಬು ।
ಒಪ್ಪು ಬಾರಾ ಸೀತೆ ಎಂದು ಕರೆಯುತ್ತಿದ್ದನು ॥ ೨೮ ॥

ಆರುಕಾಲಿನ ಮಂಚಕ್ಕೆ ಉರಿಯ ಕೆಂಡವನ್ನೊಚ್ಚು ।
ಒರಗುವೆನು ರಾಮರಾ ತೋಳಿಗೆಂದಳು ॥ ೨೯ ॥

ಹತ್ತುಕಾಲಿನ ಮಂಚಕ್ಕೆ ಕಿಚ್ಚುಕೆಂಡವನ್ನೊಚ್ಚು ।
ಒಪ್ಪುವೆನು ರಾಮರಾ ತೋಳಿಗೆಂದಳು ॥ ೩೦ ॥

ಮಂಡೋದರಿ ಕೈಯಿಂದ ಮಂಡೆಯನ್ನಿಕ್ಕಿಸುವೆ ।
ದುಂಡುಮಲ್ಲಿಗೆ ಮುಡಿಸಿ ಮಡಿಚೆಲೆಯ ಕೊಡಿಸುವೆ ॥ ೩೧ ॥

ಅವತಾರತ್ರಯ ಮಧ್ವ ಸುವ್ವಾಲಿ

ಪಾವುಡವನ್ಹಾಸೋರು ಚಾಮರವ ಬೀಸೋರು ।
ನಾರೇರು ಪನ್ನೀರು ಹಿಡಿದು ಕಾವರು ॥ ೩೨ ॥

ಸುತ್ತಲಿದ್ದ ತ್ರಿಜಟೇರು ಮಿತ್ರೇರೆಲ್ಲ ಒಂದಾಗಿ ।
ಸೀತೆಯ ಒಂದುಮಾಡಿಕೊಡಿರಿ ಎಂದನು ॥ ೩೩ ॥

ಸೀತ ಒಂದಾಗೋಳೇನೋ ಪಾಪಿರಾವಣನೆ ಕೇಳು ।
ಸಿಡಿದು ಹೋಗೋ ಕಾಲ ನಿನಗೆ ಸಾರಿತೆಂದರು ॥ ೩೪ ॥

ನಾಳೆ ಇಷ್ಟ್ಹೊತ್ತಿಗೆ ಶ್ರೀರಾಮ ಸೇತುವೆಕಟ್ಟಿ ।
ರಾವಣನ ಹತ್ತು ಶಿರವಗಳೆದು ಬಿಡುವನು ॥ ೩೫ ॥

ಕಂಡಕನಸು ಹುಸಿಅಲ್ಲ ಮಂದಮತಿ ಮನೆಗ್ಹೋಗು ।
ಸೀತೆಯ ಬಿಟ್ಟು ಸುಖಿಯಾಗು ಎಂದರು ॥ ೩೬ ॥

ಅತ್ತಲಿಂದ ರಾವಣ ಹೊಕ್ಕನಾ ಲಂಕೆಯ ।
ಇತ್ತಲಿಂದ ಹನುಮಂತ ಮರವ ಇಳಿದು ಬಂದನು ॥ ೩೭ ॥

ಹಿಂದಕ್ಕೊಂದು ಮೃಗವು ಬಂದು ಶ್ರೀರಾಮರನ್ನೆ ಅಗಲಿಸಿತು ।
ಮುಂದೆ ಅಸುರ ಕಪಿ ಎನಗೆ ಕಳುಹಿಕೊಟ್ಟನು ॥ ೩೮ ॥

ಅಂಜನೆಯ ಕಂದನು ವಾಯುಕುಮಾರನು ।
ಬಂದು ರಾಮರ ಮುದ್ರಿಕೆ ಇಟ್ಟು ಎರಗಿ ನಿಂತನು ॥ ೩೯ ॥

ಉಂಗುರವನ್ನೆ ತೆಗೆದು ಸೀತೆ ಕಂಗಳಿಗೆ ಒತ್ತಿಕೊಂಡು ।
ಉದರದಲ್ಲಿಟ್ಟು ಶಿರದಲ್ಲಿಟ್ಟು ಕೇಳುತ್ತಿದ್ದಳು ॥ ೪೦ ॥

ಏನಯ್ಯ ಹನುಮಂತ ಶ್ರೀರಾಮರು ಕ್ಷೇಮವೇ ।
ಪ್ರೇಮದಿಂದ ಎನ್ನ ಬಹಳ ನೆನೆಯುತಿಪ್ಪರೇ ॥ ೪೧ ॥

ಹವಳದ ಕುಡಿಯಂತೆ ಹೊಳೆಯುತಿಪ್ಪೊ ರಾಮರು ತಾಯಿ ।
ನಿಮ್ಮನ್ಹೊರತಾಗಿ ಅಯೋಧ್ಯೆ ಒಲ್ಲರು ॥ ೪೨ ॥

ತಾಯಿ ನಿಮ್ಮನ್ನ್ಹೊರತಾಗಿ ಕಂಗಳಿಗೆ ನಿದ್ರೆಯಿಲ್ಲ ।
ಅಯೋಧ್ಯಾಪಟ್ಟಣ ನಮಗೆ ಅಡವಿ ಎಂಬೋರು ॥ ೪೩ ॥

ತಾಯಿ ನಿಮ್ಮನ್ನು ಹೆಗಲಲಿಟ್ಟು ಶ್ರೀರಾಮರನ್ನೆ ಕೂಡಿಸುವೆ ।
ತಾಯಿ ಚಿತ್ತೈಸು ಎಂದು ನುಡಿದ ಹನುಮನು ॥ ೪೪ ॥

ಸುತ್ತಲಿದ್ದ ಕಾವಲು ಬೆನ್ನ್ಹತ್ತಿಬಾಹೊ ಭಟರು ಎಲ್ಲ ।
ಮರ್ತ್ಯ ಎನ್ನ ಕೊಂಡು ಹ್ಯಾಂಗ ಶರಧಿ ದಾಟುವಿ ॥ ೪೫ ॥

ಸಾಲದು ಧೈರ್ಯವು ನೀ ಹೋಗಿ ಹನುಮಂತ ಶ್ರೀ ।
ರಾಮರೊಡಗೂಡಿ ಬ್ಯಾಗಬಾರೊ ಎಂದಳು ॥ ೪೬ ॥

ಅಮ್ಮಾ ಹಸಿವೆ ಎಂದೆನಲು ಬಿದ್ದ ಹಣ್ಣ ಮೆಲ್ಲೆನಲು ।
ಹೆಮ್ಮರವ ಕಿತ್ತಿ ಬಿಸುಟು ಹಣ್ಣ ಮೆದ್ದನು ॥ ೪೭ ॥

ಸೀತೆಯಿದ್ದ ವನವ ಬಿಟ್ಟು ಮಿಕ್ಕವನಗಳೆಲ್ಲ ಕಿತ್ತು ।
ಬಾಳೆಯ ವನವ ಕಿತ್ತು ಧೂಳಿಮಾಡಿದ ॥ ೪೮ ॥

ನಿಂಬೆಯ ವನವ ಕಿತ್ತು ಡಂಬುಮಾಡಿದ ಹನುಮಂತ ।
ಅಕ್ಷಯ ಕುವರನ್ನ ಕುಟ್ಟಿ ಕೊಡವಿದ ॥ ೪೯ ॥

ಸುತ್ತಲಿದ್ದ ಕಾವಲು ಕೂಡಿ ಯುದ್ಧವನ್ನೆ ಮಾಡಿ ।
ಹೋಗಿ ರಾವಣೇಶನ ಮುಂದೆ ಹೇಳಿದರಾಗ ॥ ೫೦ ॥

ಇಂದ್ರಜಿತು ಬಂದು ಬ್ರಹ್ಮಾಸ್ತ್ರದಿಂದ ಕಟ್ಟಿ ।
ಕೊಂಡು ಹೋಗಿ ರಾವಣನ ಮುಂದೆ ಇಳಿದರಾಗ ॥ ೫೧ ॥

ಯಾವ ದೇಶದಿಂದ ಬಂದಿ ಯಾರ ಕಂದಯ್ಯ ನೀನು ।
ರಾವಣೇಶ ಕೇಳಿದನು ವಾನರೇಶನ ॥ ೫೨ ॥

ಎನ್ನ ಒಡೆಯ ರಾಮಚಂದ್ರ ಅವನ ಬಂಟನೆಂಬುವರು ।
ಹೆಮ್ಮೆಯಾನ ಬೇಡ ಶರಣೆನ್ನು ರಾವಣ ॥ ೫೩ ॥

ತನ್ನ ಬಂಟನಾದರೆ ಭೂಮಿ ಸಾಮ್ರಾಜ್ಯ ಕೊಡುವೆ ।
ತಳಿಗೆ ತಾಂಬೂಲವನ್ನು ತರಿಸಿಕೊಟ್ಟನು ॥ ೫೪ ॥

ಕೊಟ್ಟ ತಾಂಬೂಲವನ್ನು ತಟ್ಟೆಗ್ಹಾಕಿದ ಹನುಮ ನಿನ್ನ ।
ಕುಟ್ಟಿ ಕೆಡಹುವೆ ನಾನೀಗ ಅರಿಯಬಲ್ಲೆಯಾ ॥ ೫೫ ॥

ಏನಯ್ಯ ಹನುಮಂತ ಬಹಳ ಮಾತನಾಡುತಿದಿ ।
ರಾವಣೇಶ ಕೇಳಿದನು ರಾಮಹನುಮನ ॥ ೫೬ ॥

ನಾನಲ್ಲ ಹಿಂದಿನ ಬಾಲವೆ ಮಾತಾಡುತಲಿದೆ ।
ಲೀಲೆಯಿಂದ ಹನುಮಂತ ಬಾಲವ ತೋರಿದ ॥ ೫೭ ॥

ಬಾಲಕ್ಕೆ ತಕ್ಕ ಶಿಕ್ಷೆ ನಾನು ಮಾಡಿಸುವೆನೆಂದೆನುತ ।
ರಾವಣೇಶ ಹೇಳಿದನು ವಾನರೇಶಗೆ ॥ ೫೮ ॥

ಪಟ್ಟೆಶಾಲುಗಳ ಕೊಕ್ಕು ಬಟ್ಟೆಗಳ ಸೆಳೆದುತಂದು ।
ಸುತ್ತಿರ್ಹನುಮಂತನ್ನ ಬಾಲಕೆಂದನು ॥ ೫೯ ॥

ಚಂದ್ರಶಾಲೆಗಳ ಹೊಕ್ಕು ದಿಂಡುಗಳ ಸೆಳೆದುತಂದು ।
ಸುತ್ತಿರ್ಹನುಮಂತನ ಬಾಲಕೆಂದನು ॥ ೬೦ ॥

ಮಾಳಿಗೆ ಮನೆಯ ಹೊಕ್ಕು ಸೀರೆಗಳ ಸೆಳೆದುತಂದು ।
ಸುತ್ತಿರ್ಹನುಮಂತನ ಬಾಲಕೆಂದನು ॥ ೬೧ ॥

ಎಷ್ಟು ಬಟ್ಟೆ ಸುತ್ತಿದರು ಸುಟ್ಟ ಬಾಲ ಬೆಳೆಯುತಲಿದೆ ।
ವನವಾಸದ ಸೀತೆಸೀರೆ ತನ್ನಿರೆಂದನು ॥ ೬೨ ॥

ನುಡಿಗಳಲ್ಲಿ ಏಕೋದಾನ ಮನದ ಕೋಪವನೆ ತಾಳಿ ।
ಶೀಘ್ರದಿಂದ ಹನುಮಂತ ಬಾಲವ ಮುದುಡಿದ ॥ ೬೩ ॥

ಇಂದ್ರಜಿತು ಅತಿಕಾಯ ಶಿಶು ಮೊದಲಾದವರು ।
ಅದ್ದಿ ತೈಲದಿಂದ ಅಗ್ನಿ ಬಾಲಕೆ ಮುಟ್ಟಿಸಿದರು ॥ ೬೪ ॥

ಅವತಾರತ್ರಯ ಮಧ್ವ ಸುವ್ವಾಲಿ

ಮುಟ್ಟಿಸಿದ ಬಾಲ ಉರಿದು ಸುಟ್ಟು ಪಟ್ಟಣವು ಉರಿದು ।
ಲಂಕಪಟ್ಟಣವು ಉರಿದು ಕುಪ್ಪೆಬಿದ್ದಿತು ॥ ೬೫ ॥

ಮಾಳಿಗೆ ಮನೆಯು ಉರಿದು ಚಂದ್ರಶಾಲೆಗಳು ಉರಿದು ।
ವಿಶ್ವಕರ್ಮರು ಕೇಳಿದರು ಯಾರ ಬಂಟನು ॥ ೬೬ ॥

ಗೋಕುಲದೊಳಗೆ ಹುಟ್ಟಿ ಗೋವುಗಳ ಪಾಲಿಸಿದ ।
ತಾಟಕಿಯ ಮೂಗುಕೊಯ್ದ ರಾಮರ ಬಂಟನು ॥ ೬೭ ॥

ಮರಳಿ ಜಲವ ದಾಟಿ ಶ್ರೀರಾಮರ ಪಾದಕ್ಕೆರಗಿ ।
ಹರುಷದಿಂದ ಮಣಿಯನಿಟ್ಟು ಎರಗಿನಿಂತನು ॥ ೬೮ ॥

ಹರುಷದಿಂದ ರಾಮಚಂದ್ರ ವಾಯುತನಯನ್ನಪ್ಪಿಕೊಂಡು ।
ಮನದ ಹರುಷದಿಂದ ಸಂತೋಷಬಟ್ಟನು ॥ ೬೯ ॥

ವನಕೆ ಬಂದ ದೈತ್ಯರನ್ನೆಲ್ಲ ಎಣಿಕೆಯಿಲ್ಲದೆ ಕೊಂದು ಬಿಸುಟು ।
ಮನವ ರಕ್ಷಿಸಿದ ನಮ್ಮ ಹನುಮರಾಯನು ॥ ೭೦ ॥

ರಘುಕುಲೇಶ ರಾಮನಾದ ಯದುಕುಲೇಶ ಕೃಷ್ಣನಾದ ।
ಹನುಮ ಭೀಮಸೇನ ಕುಂತಿತನಯರಾದರು ॥ ೭೧ ॥

ಸುವ್ವಿ ಹನುಮಂತ ಸುವ್ವಿ ಸುವ್ವಿ ಭೀಮಸೇನ ಸುವ್ವಿ ।
ಸುವ್ವಿ ಮಧ್ವರಾಯರಿಗೆ ಸುವ್ವಿಲಾಲಿ ॥ ೭೨ ॥

ಹುಲಿಗೆ ಬೆದರಿ ಕುಂತಿದೇವಿ ಮಗನಚರಿಸಿ ಬಿಸುಟಿರಾಲು ।
ಹಲವು ಪರಿಯ ಶಿಖರ ನುಚ್ಚಾಗಿ ಬಿದ್ದಿತು ॥ ೭೩ ॥

ಭೀಮಸೇನನೆಂಬೊ ದಿವ್ಯನಾಮವನ್ನೆ ಇಟ್ಟರು ।
ಸೋಮಹಾಕುಲದಲ್ಲಿ ಜನಿಸಿ ಸಾರ್ವಭೌಮನು ॥ ೭೪ ॥

ಐದುಮಂದಿ ಪುತ್ರರ ಪಡೆದಳಾ ಕುಂತಿದೇವಿ ।
ಅಡವಿಯೊಳಗೆ ರಾಯ ಅಂತರಿಸಿಹೋದನು ॥ ೭೫ ॥

ಕಂಡು ವೇದವ್ಯಾಸರು ತಂದು ಮನೆಒಳಗೆ ಇಟ್ಟು ।
ಕಂದಗಳು ಇವರ ನೀವು ಸಲಹಿರೆಂದರು ॥ ೭೬ ॥

ಬ್ಯಾರೆ ಮನೆಯನ್ನು ಕಟ್ಟಿ ದಾಯಾದರ ಕಾವಲಿಟ್ಟು ।
ಓದು ಬರಹದಿಂದ ಇವರನ್ನು ಸಲಹಿರೆಂದರು ॥ ೭೭ ॥

ಹಲವು ಧರವನೇರಿ ಭೂಪ ಹುಲಿಯುನಗರಿಸಾಲ್ವವೃಕ್ಷ(?) ।
ತಲೆಯ ಪಾದದಿಂದ ಒದ್ದು ನಗುತ ಹಣ್ಣ ಮೆದ್ದರು ॥ ೭೮ ॥

ಆರ್ಯಕುಷ್ಟಿ ಮುಷ್ಟಿಯುದ್ಧ ನೀರುಚೆಲ್ಲಾಟವು ।
ಶೂರ್ರಾದರೆ ರಾಯರ್ನ ನೀವು ಗೆಲಿಸಿ ಎಂದರು ॥ ೭೯ ॥

ರಾಷ್ಟ್ರರು ಶಕುನಿಮುಖ್ಯ ದೂತರೆಲ್ಲ ವಿಂವನಿಕ್ಕೆ ।
ಆತ್ಮದಲ್ಲಿ ಜೀರ್ಣವಾಯಿತು ಅಂಜನೆತನಯಗೆ ॥ ೮೦ ॥

ಕಲಿಮಂತ್ರದಿಂದ ಜ್ವಾಲೆಗರಳ ಸುರಿವ ಫಣಿಗಳಿಂದ ।
ಪವನಸುತನ ಕಚ್ಚಿಸುತಿರಲು ಪಚನವಾಯಿತು ॥ ೮೧ ॥

ಪಾದಶರಗಳಿಂದ ಲೋಹಪಾಶಲಿಂದ ಕಟ್ಟುವರ ।
ಪ್ರವೇಶದಿಂದ ಕೆಡವಲವನ ಜನಕನೆದ್ದನು ॥ ೮೨ ॥

ಅರಗಿನ ಮನೆಯು ಮಾಡಿ ಸಾಗಿ ಬಂದು ಬಗೆಯುವರ ।
ಅರಗುಜಯಿಸಿ ಗೆದ್ದರವರ ಅನುಜ ಪಾರ್ಥರ ॥ ೮೩ ॥

ಕಕ್ಷದಲ್ಲೆ ಹಿಡಿಂಬಕನ ರಾಕ್ಷಸನ ಕೊಂದು ಪ್ರಮುಖ ।
ಕಕ್ಷವೃಕ್ಷವನ್ನೇ ಕಿತ್ತು ವೃಕ್ಷತಂದನು ॥ ೮೪ ॥

ಹಿಡಿಂಬಾಸುರನ ಕೊಂದು ಹಿಡಿಂಬಿಯ ಮದುವೆ ಆಗಿ ।
ವೇದವ್ಯಾಸರ ವಾಕ್ಯದಿಂದ ಭೀಮ ಮಗನ ಪಡೆದನು ॥ ೮೫ ॥

ಅರಸುಮಕ್ಕಳು ಸ್ವಯಂವರಕೆ ಸಾಗಿ ಬರುತಿರಲು ।
ಚಿತ್ರಶಯನ ಗಂಧರ್ವ ಅಡ್ಡಗಟ್ಟಿದ ॥ ೮೬ ॥

ಅವತಾರತ್ರಯ ಮಧ್ವ ಸುವ್ವಾಲಿ

ಅರ್ಜುನನ ಕೂಡ ಯುದ್ಧ ಮಾಡೂದು ಗಂಧರ್ವಕಂಡು ।
ಅಶ್ವಸಹಿತ ಭಸ್ಮವನ್ನೇ ಮಾಡಿ ಕೆಡವಿದ ॥ ೮೭ ॥

ಅಂಗಾರಪರ್ಣನೆಂಬೊ ನಾಮಗಂಧರ್ವಗೆ ।
ಅಶ್ವಗುರುದಕ್ಷಿಣೆಯ ಕೊಟ್ಟರಾಗಲೆ ॥ ೮೮ ॥

ಧೌಮ್ಯಾಚಾರ್ಯರೊಡಗೂಡಿ ಪಂಚಪಾಂಡವರು ಕೂಡಿ ।
ನಗರ ಪ್ರವೇಶವನೆ ಮಾಡಿದರಾಗ ॥ ೮೯ ॥

ಭಿಕ್ಷೆಬೇಡಿ ಬಕನ ಕೊಂದು ವಿಪ್ರರು ನೆರೆದಿರಲು ।
ಕೃಷ್ಣ ಕಂಡು ಸವ್ಯವಾಚಿ ಎನುತ ನುಡಿದನು ॥ ೯೦ ॥

ಖಡ್ಗವೆತ್ತಿ ಸಭೆಯೊಳಗೆ ನಿಂತಿರಲು ಬಲರಾಮ ।
ಅತ್ತೆಯಸೊಸೆ ನಮಗೆ ಏನು ಆಗೋಳೊ ॥ ೯೧ ॥

ಕೃಷ್ಣನಾಡಿದ ಮಾತಿಗೆ ನಕ್ಕು ಬಲರಾಮನು ।
ಮನದ ಹರುಷದಿಂದ ಸಂತೋಷಪಟ್ಟನು ॥ ೯೨ ॥

ಖಡ್ಗವೆತ್ತಿ ಸಭೆಯೊಳಗೆ ಬರುವ ಪಾರ್ಥನ್ನ ಕಂಡು ।
ಬಿಲ್ಲು ಹೊರೆಯ ಹೊರೆಸಿದರು ಫಲ್ಗುಣಗಾಗ ॥ ೯೩ ॥

ಮುಗುಳುನಗೆಯಿಂದಲೆ ಕಮಲಮುಖಿಯು ಮಾಲೆ ಪಿಡಿದು ।
ಫಲ್ಗುಣನ ಕೊರಳಿಗ್ಹಾಕಿ ಬದಿಯಲ್ಲಿ ನಿಂತಳು ॥ ೯೪ ॥

ಸಿಟ್ಟಿನಿಂದ ರಾಯರೆಲ್ಲ ಖಡ್ಗವೆತ್ತಿ ಸಭೆಯೊಳಗೆ ।
ಭಿಕ್ಷುಕರು ಕ್ಷತ್ರಿಯರ ಪುತ್ರಿ ಒಯ್ದರಾ ॥ ೯೫ ॥

ಅದೇ ಬಾಣಗಳಿಂದ ಜಗಳಕ್ಹೋದನರ್ಜುನ ಭೀಮ ।
ಮರವ ಮುರಿದು ಗೆಲಿದ ಕೆಲವು ರಾಯರ ॥ ೯೬ ॥

ರವಿಸುತನ ಬಾಣಜಯಿಸಿ ಜಗಳಕ್ಹೋದನರ್ಜುನ ।
ಪಾಂಡುಭೂಪರೈವರು ಕುಂಬಾರನ ಸಾಲಿಗೆ ಬಂದರು ॥ ೯೭ ॥

ಅವತಾರತ್ರಯ ಮಧ್ವ ಸುವ್ವಾಲಿ

ಸೋದರಮಾವನ ಹಾರಿಸಿದನಂಬರಕ್ಕೆ ಘಾಸಿಯಾ ।
ಗದ್ವಾಂಗೆ ಹಸನಾಗಿ ಇಳಿಸಿದ ॥ ೯೮ ॥

ರವಿಸುತನ ಬಾಣಜಯಿಸಿ ಪಾಂಡು ಭೂಪರೈವರು ।
*** ಕುಂಬಾರನ ಸಾಲಿಗೆ ಬಂದರು ॥ ೯೯ ॥

ಬಂದಿರಾ ಕಂದಗಳಿರಾ ಎಂದು ಕುಂತಿ ಕೇಳಲು ।
ತಂದೆವೆ ತಾಯಿ ನಿಧಾನವೆಂದರು ॥ ೧೦೦ ॥

ಭಿಕ್ಷೆತಂದೆವೆ ಎಂದು ಸತ್ಯಧರ್ಮ ನುಡಿಯಲು ।
ಇಟ್ಟುಕೊಂಡು ಐವರು ಉಣ್ಣಿರೆಂದಳು ॥ ೧೦೧ ॥

ಅನ್ನವಲ್ಲ ತಾಯಿ ಕನ್ಯಾರತ್ನವು ಎಂದು ।
ಚೆನ್ನಾಗಿ ಯಮಪುತ್ರ ಮಾತನಾಡಿದ ॥ ೧೦೨ ॥

ಮರೆದು ಮಾತನಾಡಿದಿ ಇವರ ಬಗೆಯು ಎನಗೆ ತಿಳಿಯಲಿಲ್ಲ ।
ಜಗದೋದ್ಧಾರ ಕೃಷ್ಣ ತಾನೆ ಬಲ್ಲನು ॥ ೧೦೩ ॥

ಕುಂತಿಮುಖದ ವಾಕ್ಯದಿಂದ ಮಂತ್ರದ ಪ್ರಯೋಗದಿಂದ ।
ಸಂಪತ್ತು ಉಂಟು ನಮಗೆ ಎಂದು ಸುಖದಲಿದ್ದರು ॥ ೧೦೪ ॥

ನಮ್ಮಮ್ಮನಾಡಿದ ಮಾತಿಗೆ ಅನ್ಯಥಾವಾಗದು ।
ಕನ್ಯೆ ನಮ್ಮೈವರಿಗೆ ಸಲ್ಲವೆಂದರು ॥ ೧೦೫ ॥

ಆಗ ದೃಷ್ಟದ್ಯುಮ್ನನು ಅವರಾಡಿದ ಮಾತುಗಳನು ।
ಬಾಗಿಲದ ಮರೆಗೆ ನಿಂತು ಕೇಳುತಿದ್ದನು ॥ ೧೦೬ ॥

ಆಗ ದೃಷ್ಟದ್ಯುಮ್ನನು ಅವರಾಡಿದ ಮಾತು ಕೇಳಿ ।
ಇವರು ಕ್ಷತ್ರಿಯರೆಂದು ಹೇಳಿದನಾಗ ॥ ೧೦೭ ॥

ಯಾರಾದರೇನು ಶೂದ್ರಾದರೇನು ।
ಬ್ರಾಹ್ಮರಾಗೊಡವೆ ನಮಗ್ಯಾತಕೆಂದನು ॥ ೧೦೮ ॥

ಅವತಾರತ್ರಯ ಮಧ್ವ ಸುವ್ವಾಲಿ

ಹರುಷದಿಂದ ದ್ರುಪದರಾಯ ಅಂದಣವ ಶೃಂಗರಿಸಿ ।
ತಂಡತಂಡದಲಿ ಪಾಂಡವರ ಕರೆಯಕಳಿಸಿದ ॥ ೧೦೯ ॥

ಆಯದುಳ್ಳದರಮನೆಯ ಆಗ ಶೃಂಗರಿಸಿತು ।
ಅರ್ಜುನ ಹೊಕ್ಕನು ಬಹಳ ಹರುಷದಿಂದಲೆ ॥ ೧೧೦ ॥

ಹರುಷದಿಂದ ದ್ರುಪದರಾಯ ತನ್ನ್ಹೆಂಡತಿಯ ಕರೆಯಲ್ಕಳಿಸಿ ।
ಗಂಗೆಲಿ ಉದಕ ತಾಂಬಾಣವ ತರಿಸಿದ ॥ ೧೧೧ ॥

ಪಾದ ತೊಳೆಯುವ ಸಮಯದಲ್ಲೆ ಪಂಚಪಾದವನೆ ಕಂಡ ।
ಚಂಚಲೇಶರಾಯ ತಾ ನಿಂತುಕೊಂಡನು ॥ ೧೧೨ ॥

ಕಂತುಪಿತ ಸ್ವಾಮಿ ಬಂದು ಅವರ ಚಿಂತೆ ಬಿಡಿಸಿ ಕಾಯ್ದು ।
ತಂಡತಂಡದಲೆ ಪಾಂಡವರ್ಗೆ ಧಾರೆ ಎರೆಸಿದ ॥ ೧೧೩ ॥

ಬಂಗಾರದ ಗಿಂಡಿಯೊಳಗೆ ಭಾಗೀರಥೀ ಉದಕ ತುಂಬಿ ।
ಧರ್ಮರಾಯ ಶ್ಯಾಮಲೆಗೆ ಧಾರೆ ಎರೆಸಿದ ॥ ೧೧೪ ॥

ರನ್ನದ ಗಿಂಡಿಯೊಳಗೆ ನರ್ಮದಾ ಉದಕ ತುಂಬಿ ।
ಭೀಮಸೇನ ಭಾರತಿಗೆ ಧಾರೆ ಎರೆಸಿದ ॥ ೧೧೫ ॥

ಮುತ್ತಿನ ಗಿಂಡಿಯೊಳಗೆ ಗೋದಾವರೀ ಉದಕತುಂಬಿ ।
ಅರ್ಜುನ ಶಚೀದೇವಿಗೆ ಧಾರೆಎರೆಸಿದ ॥ ೧೧೬ ॥

ಹವಳದ ಗಿಂಡಿಯೊಳಗೆ ಕೃಷ್ಣವೇಣಿ ಉದಕ ತುಂಬಿ ।
ನಕುಲ ಉಷಾದೇವಿಗೆ ಧಾರೆ ಎರೆಸಿದ ॥ ೧೧೭ ॥

ಬಂಗಾರದ ಗಿಂಡಿಯೊಳಗೆ ಭಾಗೀರಥಿ ಉದಕ ತುಂಬಿ ।
ಪುತ್ರಗೆ ಸಹದೇವಗೆ ಧಾರೆ ಎರೆಸಿದ ॥ ೧೧೮ ॥

ನಾಕು ದಿನದ ಉತ್ಸವ ನಾಗೋಲಿಯ ಮಾಡಿ ।
ಮನದ ಹರುಷದಿಂದ ಸಂತೋಷಪಟ್ಟನು ॥ ೧೧೯ ॥

ಮುತ್ತಿನ ಗೊಂಬೆಯನ್ನು ಮಿತ್ರೆದ್ರೌಪದಿ ಉಡಿಯೊಳಗಿಟ್ಟು ।
ಹಸ್ತಿನಾಪಟ್ಟಣಕ್ಕೆ ಕಳುಹಿದ ॥ ೧೨೦ ॥

ಹವಳದ ಗೊಂಬೆಯನ್ನು ಹರದಿ ದ್ರೌಪದಿ ಉಡಿಯೊಳಗಿಟ್ಟು ।
ಹಸ್ತಿನಾಪಟ್ಟಣಕ್ಕೆ ಕಳುಹಿದ ॥ ೧೨೧ ॥

ಆಗ ಗಾಂಧಾರಿಯು ಮನದಲ್ಲಿ ಕಳವಳಗೊಂಡು ।
ಬಂದಿತು ಕಂದಗಳಿಗೆ ಮೃತ್ಯು ಎಂದಳು ॥ ೧೨೨ ॥

ಧರ್ಮವೇ ಮುಖ್ಯವೆಂದು ಧರ್ಮದಿಂದ ರಾಜ್ಯವಾಳಿದ ।
ಧರ್ಮರಾಯ ತಾನೇ ಯಜಮಾನನಾದನು ॥ ೧೨೩ ॥

ವ್ಯಾಸಕರ್ಣ ವ್ಯಾಸಪರ್ಣ ವ್ಯಾಸವಾಕ್ಯದಿಂದ ವೇದ ।
ವ್ಯಾಸರ ವಾಕ್ಯದಿಂದ ಧರ್ಮ ರಾಜ್ಯವಾಳಿದ ॥ ೧೨೪ ॥

ಆಗ ನಾರದರು ಹೇಳಿದರು ಒಂದು ಮಾತು ಪಾಂಡು ।
ರಾಯಗೆ ಸ್ವರ್ಗವು ಇಲ್ಲವೆಂದರು ॥ ೧೨೫ ॥

ಆಗ ಶ್ರೀಹರಿಯನೆ ಭಾಗ್ಯದಿಂದಲೆ ಕರೆಯಕಳಿಸಿ ।
ರಾಜಸೂಯಯಾಗವನ್ನೆ ಮಾಡು ಎಂದರು ॥ ೧೨೬ ॥

ರಾಜಶತೃಘ್ನನಾದ ಜರಾಸಂಧನ ವಧೆಮಾಡಿ ।
ರಾಜಸೂಯದಲ್ಲಿ ಶ್ರೀಕೃಷ್ಣನ ಪೂಜಿಸಿದರು ॥ ೧೨೭ ॥

ಆಗ ದುರ್ಯೋಧನನ್ನ ಭಾಗ್ಯದಿಂದಲೆ ಕರೆಯಕಳಿಸಿ ।
ಏನುಮಾಡ್ತೀರಿ ಭಾವ ಕೆಲಸ ಎನುತ ಕೇಳ್ಯಾಳು ॥ ೧೨೮ ॥

ಬ್ರಾಹ್ಮರಿಗೆ ದಕ್ಷಿಣೆಯ ಬೇಡಿದಷ್ಟು ಕೊಡುವೆನೆಂದ ।
ಕೃಷ್ಣ ವಿನೋದದಿಂದ ಕೈಹೊಡೆದು ನಕ್ಕನು ॥ ೧೨೯ ॥

ಭಕ್ಷ್ಯ ತುಪ್ಪ ಕೆನೆಮೊಸರು ವಿಪ್ರರು ಬ್ರಾಹ್ಮರು ಉಂಡು ।
ಸತ್ಯರ್ಧಮರಾಯನ್ನ ಹೊಗಳುತಿದ್ದರು ॥ ೧೩೦ ॥

ದಕ್ಷಿಣೆಯ ಕೊಟ್ಟು ಕೊಟ್ಟು ರಾಯ ರೆಟ್ಟೆಸೋತು ನಿಂತಿರಲು ।
ಮರಳಿ ತುಂಬಿತು ಧನವು ಮೊದಲಿನಂದದಿ ॥ ೧೩೧ ॥

ಕೊಟ್ಟು ಕೊಟ್ಟು ಕುರುರಾಯ ರೆಟ್ಟೆಸೋತು ನಿಂತಿರಲು ।
ಮರಳಿ ತುಂಬಿತು ಧನವು ಮೊದಲಿನಂದದಿ ॥ ೧೩೨ ॥

ಅಮೃತ ಸ್ನಾನವನೆ ಮಾಡಿ ಹಿಡಿಹೊನ್ನು ದಾನವನೆ ಕೊಟ್ಟು ।
ಮಡದಿ ಮಕ್ಕಳಸಹಿತ ಮನೆಗೆ ಬಂದರು ॥ ೧೩೩ ॥

ಬಹಳ ಕಷ್ಟಪಟ್ಟೆ ತಂಗಿ ಎಂದು ಕೇಳಲು ಕೃಷ್ಣ ।
ನಿಮ್ಮಿಂದ ನಿವೃತವಾಯಿತೆನುತ ನುಡಿದಳು ॥ ೧೩೪ ॥

ಅಂಗಿಯನ್ನೆ ಮೇಲಕ್ಕೆತ್ತಿ ಬಂದನು ಕುರುರಾಯ ।
ಕಂಗಳಿಲ್ಲವೆ ಭಾವ ಎನುತ ಕೇಳ್ಯಾಳು ॥ ೧೩೫ ॥

ಅರಿಯ ಸಭೆಯ ಕುರುರಾಯ ನಡುವೆ ಬಿದ್ದ ನೀರೊಳಗೆ ।
ದೊಡ್ಡಧ್ವನಿಯ ಮಾಡಿ ಭೀಮ ನಗುತಲಿದ್ದನು ॥ ೧೩೬ ॥

ಸಿಟ್ಟಿಲಿಂದ ಕುರುರಾಯ ಬಂದನು ತನ್ನ ಮನೆಗೆ ।
ತಂದೆಯ ಕೂಡ ಮಾತಾಡಕೂತನು ॥ ೧೩೭ ॥

ಕಪಟಮಹಿಮನಾಗ ನಿರ್ಮಲವಾದ ಮಂಟಪದಲ್ಲೇ ।
ಅರ್ಥಿಯಿಂದ ಜೂಜ ಬಂದಾಡ ಕುಳಿತರು ॥ ೧೩೮ ॥

ರಾಯರಾಯರೆಲ್ಲಕೂಡಿ ಹಾರಪದಕಗಳನೆ ಹಾಕಿ ।
ಅರ್ಥಿಯಿಂದಲಿ ಬಂದಾಡ ಕುಳಿತರು ॥ ೧೩೯ ॥

ನೀನು ಸೋತರೆ ಕುರುರಾಯ ಹೋಗ್ತೀಯೊ ವನವಾಸಕ್ಕೆಂದು ।
ಸುತ್ತು ಡಂಗುರವ ಹೊಯ್ಸಿ ಆಡಕುಳಿತರು ॥ ೧೪೦ ॥

ಮತ್ತೆ ಸೋತರೆ ಕುರುರಾಯ ಹೋಗ್ತೀಯೊ ವನವಾಸಕ್ಕೆಂದು ।
ಸುತ್ತು ಡಂಗುರವ ಹೊಯ್ಸಿ ಆಡಕುಳಿತರು ॥ ೧೪೧ ॥

ಅವತಾರತ್ರಯ ಮಧ್ವ ಸುವ್ವಾಲಿ

ಆನೆ ಕುದುರೆ ದಳವು ಸಹಿತ ಭರಣ ಭಂಡಾರವೆಲ್ಲ ।
ಮಡದಿ ದ್ರೌಪದಿಯ ಪಣಕ್ಕಿಟ್ಟು ಸೋತನು ॥ ೧೪೨ ॥

ಹಿರಿಯ ಅಣ್ಣ ಕಿರಿಯ ತಮ್ಮ ಬೊಗಸೆ ಬಂಟರನ್ನೆಲ್ಲ ।
ಮಡದಿ ದ್ರೌಪದಿಯ ಪಣಕ್ಕಿಟ್ಟು ಸೋತನು ॥ ೧೪೩ ॥

ಕಪಟವಾಕ್ಯದಿಂದ ಶಕುನಿ ಖಳರ ಶಪಥ ಮಾಡಿ ಗೆಲಲು ।
ಆಗ ಹೋದ್ರು ವನವಾಸಕ್ಕೆ ವೀರ ಪಾಂಡುತನಯರು ॥ ೧೪೪ ॥

ಸಕಲ ಮುನಿಗಳೊಡನೆ ಸುಖದ ಎಂಬೊ ವಿಷ್ಣುಭಕ್ತರಿಗೆ ।
ಎಂದೆಂದಿಗೂ ಭಯವು ಇಲ್ಲವೊ ॥ ೧೪೫ ॥

ನೀಚಬುದ್ಧಿಯುಳ್ಳ ದುಷ್ಟ ಪಾಪಿಕೀಚಕನ ಕೊಂದು ।
ಸಾಕ್ಷಿಮುಖದಿ ವಿರಾಟರಾಯನ ಸಭೆಯಲಿದ್ದರು ॥ ೧೪೬ ॥

ಕಳೆದು ಸಪ್ತದಿವಸವೆರಡು ಖಳರ ಶಪಥ ಮಾಡಿಗೆಲು ।
ಬೆರಗುತ್ತಿದ್ದ ಖಳಜನರ ಬೆರಗುಮಾಡಿದ ॥ ೧೪೭ ॥

ಸೂರ್ಯಮಾನದಿಂದ ದಿನವು ಪೂರ್ತಿ ಆಗಿಲ್ಲವೆಂದು ।
ನಡೆಯೊ ವನವಾಸಕ್ಕೆಂದು ನುಡಿದ ಕೌರವ ॥ ೧೪೮ ॥

ಚಿನ್ನದುಂಗರವನಿಟ್ಟು ಬಣ್ಣಶಾಲೆಯನೆ ಹೊದ್ದು ।
ಚೆನ್ನ ಕೃಷ್ಣ ಬಂದನು ಮಧ್ಯವರ್ತಿಗೆ ॥ ೧೪೯ ॥

ಐದು ಮಂದಿಗೈದು ಗ್ರಾಮ ಕೊಡಬೇಕೆನುತಲೆ ।
ಪರಮಾತ್ಮ ಹೇಳಿದನು ಕುರುರಾಯಗೆ ॥ ೧೫೦ ॥

ಆದಿಯಲ್ಲಿ ಗಳಿಸಲಿಲ್ಲ ಸೂಜಿಗ್ಹೊಂದಿದಷ್ಟು ಭೂಮಿ ।
ರಾಜತನಯ ರೌದ್ರರಣರಂಗ ಮೆರೆಯಲಿ ॥ ೧೫೧ ॥

ಈ ಪರಿಯಿಂದ ಅರ್ಥ ಪಾಪಿಸುತರ ಹೃದಯರಕ್ತವನ್ನು ।
ಭೂಪ ಸುತರು ತಿಳಿದು ಮದದಿ ಎಲ್ಲ ರಣಕೆ ಬಂದರು ॥ ೧೫೨ ॥

ಅವತಾರತ್ರಯ ಮಧ್ವ ಸುವ್ವಾಲಿ

ಗಾಂಧಾರಿಸುತರ ಹೃದಯ ಗದೆಯಿಂದ ಸೀಳಿದನು ।
ಪರಶುರಾಮಗಾಹುತಿಯ ಕೊಡುತಲಿದ್ದನು ॥ ೧೫೩ ॥

ಸಿಂಹನಾದದಿಂದ ವೈರಿ ಸಿಂಹನಾದ ಮಾಡುತಿರಲು ನಾರ ।
ಸಿಂಹಗರ್ಜಿಸಿದ ಭೀಮಸೇನನು ॥ ೧೫೪ ॥

ನೀರಡಿಸಿದೆ ಗದೆಗೆ ಗಾಂಧಾರಿಸುತರ ರಕ್ತವನ್ನು ।
ಪಾರಣೆಯ ಮಾಡಿಸಿದ ಪವನತನಯನು ॥ ೧೫೫ ॥

ಸುವ್ವಿ ಹನುಮಂತ ಸುವ್ವಿ ಸುವ್ವಿ ಭೀಮಸೇನ ಸುವ್ವಿ ।
ಸುವ್ವಿ ಮಧ್ವರಾಯರಿಗೆ ಸುವ್ವಿಲಾಲಿ ॥ ೧೫೬ ॥

ಅಚ್ಯುತನ್ನ ಪಾದಧ್ಯಾನ ತಮ್ಮ ಹೃದಯದೊಳಗೆ ಇಟ್ಟು ।
ತಮ್ಮ ಕೀರ್ತಿ ಮೂರುಲೋಕದೊಳಗೆ ಇಟ್ಟರು ॥ ೧೫೭ ॥

ಜ್ಞಾನ ಕಲಿಕಾಲವೆಲ್ಲ ಶೂನ್ಯವಾಗಿ ಹೋಗುತಿರಲು ।
ಶ್ರೀರಮಣನಾಜ್ಞೆಯಿಂದ ಭೀಮ ಮಧ್ವನಾದನು ॥ ೧೫೮ ॥

ಮಧ್ಯಗೇಹ ಭಟರು ತಪಸು ಮಾಡುತಿಲು ವಾಸುದೇವ ।
ಉದ್ಧರಿಪ ಮಗನ ಕೊಟ್ಟ ಮಧ್ವರಾಯರ ॥ ೧೫೯ ॥

ಗರುಡಗಂಬದ ಮೇಲೆ ಮರುಳ ಪುರುಷ ಕುಣಿಕುಣಿದು ।
ಸರುವಜ್ಞರು ಜನಿಸುತ್ತಾರೆನುತ ನುಡಿದರು ॥ ೧೬೦ ॥

ಉರ್ವಿಯ ಮೇಲೆ ಇದ್ದ ಶುದ್ಧ ಸಾಧುಜನರಿಗೆ ।
ಬುದ್ಧಿ ಪ್ರಕಾಶವನ್ನೆ ಮಾಡಿಕೊಡುವರು ॥ ೧೬೧ ॥

ಭೂಮಿಯಮೇಲೆ ಇದ್ದ ಸಾಧುಸಜ್ಜನರಿಗೆ ।
ಜ್ಞಾನಪ್ರಕಾಶವನ್ನೆ ಮಾಡಿಕೊಡುವರು ॥ ೧೬೨ ॥

ನಾಲ್ಕು ತಿಂಗಳಾಗುತಿರಲು ಆ ಶಿಶುವನ್ನೆತ್ತಿಕೊಂಡು ।
ಪ್ರೀತಿಯಿಂದ ಬಂದಳಾನಂತಶಯನಕೆ ॥ ೧೬೩ ॥

ಮಗನ ಮನೆಯೊಳಗೆ ಇಳಿಸಿ ಕೆಲಸಕ್ಕೊಳಗ್ಹೋದಳು ।
ತಡೆದಳೆಂದು ಬಿಕ್ಕಿ ಬಿಕ್ಕಿ ಅಳುತಲಿದ್ದರು ॥ ೧೬೪ ॥

ಎತ್ತಿಕೊಂಡರೊಲ್ಲರು ಕಚ್ಚುಹೋರಿ ಒದರುತಿರೆ ।
ಕುಚ್ಚಿದ ಹುರುಳಿಯನ್ನು ತಿನಿಸುತಿದ್ದಳು ॥ ೧೬೫ ॥

ಎತ್ತಿಗಿಟ್ಟ ಹುರುಳಿಯನು ಚಿಕ್ಕವಗೆ ತಿನಿಸಲು ।
ಸಿಟ್ಟಿನಿಂದ ಮಗಳನ ಝುಬರಿಸಿಕೊಂಡರು ॥ ೧೬೬ ॥

ಕೆಲವುತಿಪ್ಪೆ ಕೆರೆಯೊಳು (?) ಹುರುಳಿ ತಿನಲು ವಾಸುದೇವ ।
ಶ್ರೀಹರಿಯೇ ರಕ್ಷಿಸೆಂದು ಬೇಡಿಕೊಂಡರು ॥ ೧೬೭ ॥

ತಾಯಿ ಆ ಗುಡಿಯ ದೇವರಿಗೆ ಕರವ ಮುಗಿದು ।
ತೀವ್ರದಿಂದ ಬಂದರಾ ಅನಂತಶಯನಕೆ ॥ ೧೬೮ ॥

ಇಂದಿರೇಶನ ಪಾದವ ನೆನೆದು ಆನಂದಭರಿತರಾದರು ।
ವಂದನೆಯ ಮಾಡಿ ಕೈಯ ಮುಗಿದು ನಿಂತರು ॥ ೧೬೯ ॥

ತವರುಮನೆ ಮದುವೆಯೆಂದು ಪರಮೋತ್ಸಾಹದಿಂದ ।
ಮಗನ ಮೇಲಿನ್ಹಂಬಲವ ಮರೆತುಬಿಟ್ಟಳು ॥ ೧೭೦ ॥

ಎರಡು ವರ್ಷವಾಗಲು ಶಿಶುವು ತೊದಲು ನುಡಿಯುತ ।
ನಡೆದು ಬಂದಿತು ಅನಂತಶಯನಕೆ ॥ ೧೭೧ ॥

ಎಲ್ಲರೂ ಕಂಡು ಎಲ್ಲಿಗೆ ಪಯಣವೆನಲು ।
ನಮ್ಮ ಸ್ವಾಮಿದರುಶನಕ್ಕೆ ಬಂದೆವೆಂದರು ॥ ೧೭೨ ॥

ಚಿಕ್ಕವನ ಕಾಣದೆ ದಿಕ್ಕು ದಿಕ್ಕು ಹುಡುಕುತ ।
ಚಚ್ಚರದಿ ಬಂದಳೆ ಅನಂತಶಯನಕೆ ॥ ೧೭೩ ॥

ಬಾಲಕನ್ನ ಕಾಣದೆ ಕೇರಿಕೇರಿ ಹುಡುಕುತ ।
ಭ್ಯಾಗದಿಂದ ಬಂದಳಾನಂತಶಯನಕೆ ॥ ೧೭೪ ॥

ಅವತಾರತ್ರಯ ಮಧ್ವ ಸುವ್ವಾಲಿ

ಬಾಲಕರ ಕೂಡಿ ಕೊಂಡು ವಿಮಾನಗಿರಿಯಲಾಡುತಿರಲು ।
ಬಾರೊ ವಾಸುದೇವ ಎಂದು ತಾಯಿ ಮಗನ ಕರೆದಳು ॥ ೧೭೫ ॥

ತಾಯಿ ಕರೆದಳು ಎಂದು ವಿಮಾನ ಗಿರಿಯ ಧುಮುಕಿ ಬಂದು ।
ಪಾದ ಊರಿ ಜನರ ಪಾವನ್ನ ಮಾಡಿದರು ॥ ೧೭೬ ॥

ಮಣಿಮಂತನೆಂಬೊ ದೈತ್ಯ ಮೈಗೆ ಸುತ್ತಿ ಬರುತಿರಲು ।
ಎಡದ ಪಾದದಿಂದಲವನ ವರೆಸಿಬಿಟ್ಟರು ॥ ೧೭೭ ॥

ಪವಳದ ವೃಕ್ಷ ತಂದು ತಲೆಕೆಳಗೆ ಮಾಡಿ ಬಿತ್ತೆ ।
ಕೊನೆ ಕೊಂಬಿನಿಂದ ಫಲಶುಂಚಿವಾಯಿತು ॥ ೧೭೮ ॥

ಪಿತೃಋಣವ ಕೇಳಿಬರಲು ಆಡುತಿರಲು ಹುಣಸೆ ಪಿಕ್ಕ ।
ಎಣಿಸಿಕೊಟ್ರೆ ಮುಕ್ತಿ ಆಯಿತಾಯಿತವರಿಗೆ ॥ ೧೭೯ ॥

ಬಾಲಕರನ ಕೂಡಿಕೊಂಡು ಬಹಳ ವಿಧ್ಯುಕ್ತದಿಂದ ।
ಕಾಲದಲ್ಲಿ ಮುಂಜವಿಯಾಯ್ತು ಕಮಲನೇತ್ರಗೆ ॥ ೧೮೦ ॥

ಉಪನಿಷತ್ತು ಓದಿಕೊಂಡು ವನದೊಳಗೆ ಆಡುತಿರಲು ।
ಕಿವಿಯ ಊದಿ ತಲೆಯ ನೋವು ಬಿಡಿಸಿದ ಗುರುವಿಗೆ ॥ ೧೮೧ ॥

ರಾಗಮಾತ್ರ ರಾಗವಿಲ್ಲ ಆ ಮಹಾಯೋಗಿಗಳು ।
ಬೇಗದಿಂದ ಸನ್ಯಾಸಿ ಆಗು ಎಂದರು ॥ ೧೮೨ ॥

ವರುಷ ನೋಡು ಬಾಲನೀನು ಬಯಸದಿರು ಸನ್ಯಾಸ ।
ಬಹಳ ತಪಸಿನಿಂದ ನಿನ್ನ ಪಡೆದೆನೆಂದಳು ॥ ೧೮೩ ॥

ಹಾಲುತುಪ್ಪವ ಕುಡಿದು ಬಹಳ ಕಷ್ಟದಿಂದ ಪಡೆದೆ ।
ಚಿಕ್ಕವಗೆ ಸನ್ಯಾಸ ಬೇಡ ಎಂದಳು ॥ ೧೮೪ ॥

ಉಟ್ಟ ಧೋತ್ರವನ್ನೆ ಬಿಚ್ಚಿ ಕಟ್ಟಿಕೊಂಡು ಕೌಪೀನ ।
ಆನಂದತೀರ್ಥರೆಂಬ ಸನ್ಯಾಸಿಯಾದರು ॥ ೧೮೫ ॥

ಅವತಾರತ್ರಯ ಮಧ್ವ ಸುವ್ವಾಲಿ

ಭಿಕ್ಷುತನವ ಕೊಂಡು ಅಪೇಕ್ಷಿಸಿ ಮಗನ ಪಡೆದೆ ನಮ್ಮ ।
ರಕ್ಷಣೆಯ ಮಾಡುವವರ ಕಾಣೆನೆಂದಳು ॥ ೧೮೬ ॥

ವಿಷ್ಣುತೀರ್ಥರೆಂಬೊ ಮಗನ ಕೊಟ್ಟು ತಾಯಿ ಸಂತವಿಟ್ಟು ।
ಅಪ್ಪಣೆಯ ಕೊಂಡು ಆಶ್ರಮಕೆ ಬಂದರು ॥ ೧೮೭ ॥

ಶ್ರೀಮದಾಚಾರ್ಯರಿಗೆ ತ್ರಿವಿಕ್ರಮಪಂಡಿತಾಚಾರ್ಯರು ।
ಪಾದದ ಮೇಲೆ ಬಿದ್ದು ಶಿಷ್ಯರಾದರು ॥ ೧೮೮ ॥

ಇಂದಿರೇಶ ಶ್ರೀಮದಾನಂದತೀರ್ಥರಪ್ಪಿಕೊಂಡು ।
ಚಂದದಿಂದ ಏಕಾಂತ ಆಡುತಲಿದ್ದರು ॥ ೧೮೯ ॥

ಮರಳಿ ಬದರಿಕಾಶ್ರಮಕ್ಕೆ ತೆರಳಿದ ಮಧ್ವರಾಯರು ।
ಪರ್ವತವ ಕಂಡು ಆಶ್ಚರ್ಯಪಟ್ಟರು ॥ ೧೯೦ ॥

ಪರ್ವತದ ಮಹಿಮೆಯನ್ನು ವರ್ಣಿಸಲು ಸಾಧ್ಯವಿಲ್ಲ ।
ಗರುಡಶೇಷ ರುದ್ರರಾರಿಂದಲಾದರು ॥ ೧೯೧ ॥

ಈ ತೀರ್ಥಕ್ಕೆ ಸರಿಯಿಲ್ಲ ಈ ಕ್ಷೇತ್ರಕ್ಕೆ ಸಮವಿಲ್ಲ ।
ಶಾಸ್ತ್ರೋಕ್ತದಿಂದ ನಿರ್ಣಯ ಮಾಡಿದರು ॥ ೧೯೨ ॥

ಭರತಖಂಡವನೆಲ್ಲ ಚರಿಸಿ ಮಧ್ವರಾಯರು ।
ಉಡುಪಿ ಎಂಬೋ ಕ್ಷೇತ್ರಕ್ಕೆ ಬಂದು ವಾಸ ಮಾಡಿದರು ॥ ೧೯೩ ॥

ಕಡಲ ಮಧ್ಯದಲ್ಲಿ ಒಂದು ಹಡಗು ಬಂದು ನಿಂತಿರಲು ।
ಕಂಡು ಮಧ್ವರಾಯರು ಕೈಯ ಬೀಸಿದರು ॥ ೧೯೪ ॥

ಹಡಗು ಬಂದು ದಡಕೆ ಸೇರಿ ಶ್ರೀಮದಾಚಾರ್ಯರಿಗೆ ।
ಏನುಬೇಡ್ತಿರಿ ಬೇಡಿಕೊಳ್ಳಿ ಕೊಡುವೆನೆಂದರು ॥ ೧೯೫ ॥

ಮುತ್ತುಮಾಣಿಕ್ಯ ಏಕೆ ಚಿನ್ನಬೆಳ್ಳಿ ನಮಗೆ ಏಕೆ ।
ಬೇಡುವೆವು ಮೂರು ಮಣ್ಣಿನಗಡ್ಡೆ ಎಂದರು ॥ ೧೯೬ ॥

ಅವತಾರತ್ರಯ ಮಧ್ವ ಸುವ್ವಾಲಿ

ಒಂದು ಗಡ್ಡೆ ಹೆಗಲಲ್ಲಿಟ್ಟು ಒಂದು ಗಡ್ಡೆ ಶಿರದಲ್ಲಿಟ್ಟು ।
ಚಂದದಿಂದ ದ್ವಾದಶಸ್ತೋತ್ರ ಹೇಳುತ ಬಂದರು ॥ ೧೯೭ ॥

ಮಧ್ಯಮಾರ್ಗದಲ್ಲೇ ಒಂದು ಗಡ್ಡೆ ಬಿದ್ದು ಒಡಭಾಂಡೇಶ್ವರಾಯ್ತು ।
ಮತ್ತೊಂದು ಗಡ್ಡೆ ಬಿದ್ದು ದುರ್ಗಿ ಜನಿಸಿಹೋದಳು ॥ ೧೯೮ ॥

ರಜತಪೀಠಪುರದೊಳಾಗ ರಾಜಮಂದಿರವ ಮಾಡಿ ।
ರಮ್ಯಮೂರ್ತಿ ಕೃಷ್ಣನ ಪ್ರತಿಷ್ಠಿಸಿದರು ॥ ೧೯೯ ॥

ಕೃಷ್ಣನ ಪ್ರತಿಮೆ ಒಂದು ವಿಠಲನ ಪ್ರತಿಮೆ ಎರಡು ।
ವರಾಹ ನಾರಸಿಂಹನ ಪ್ರತಿಮೆಯನ್ನೆ ಕೊಟ್ಟರು ॥ ೨೦೦ ॥

ಎಂಟುಮಠದವರಿಗೆ ಎಂಟು ಮೂರ್ತಿಯನ್ನೆ ಕೊಟ್ಟು ।
ಸಂತತ ಶ್ರೀಕೃಷ್ಣನನ್ನೆ ಪೂಜಿಸುತ್ತಿದ್ದರು ॥ ೨೦೧ ॥

ಉಷಃಕಾಲದಲ್ಲೆ ಎದ್ದು ಶ್ರೀಕೃಷ್ಣನ ಪೂಜಿಸಿ ।
ಸಾಯಂಕಾಲದಲ್ಲೆ ಸುಬ್ರಹ್ಮಣ್ಯಕೆ ಬಂದರು ॥ ೨೦೨ ॥

ಮಧ್ಯಾಹ್ನ ಕಾಲದಲ್ಲೆ ಮಧ್ಯತಾಳಮಠಕೆ ಬಂದ ।
ಮಧ್ವರಾಯರ ಮಹಿಮೆ ಮೂರು ಜಗವ ತುಂಬಿತು ॥ ೨೦೩ ॥

ಕೋಟಿ ಸೂರ್ಯರ ಕಾಂತಿ ಗೋಪುರ ಪ್ರಕಾಶದ ಬೆಳಕು ।
ವಾಸುದೇವರ ಪಟ್ಟಣದೊಳು ಶೋಭಿಸುತಿದ್ದವು ॥ ೨೦೪ ॥

ಹರಾನಯನ ಎಂಬುವನ ಪುರದಿ ಸಾಗರದಿ ಹೊಳೆವೊ ।
ಪರಿಯೀ ಪಟ್ಟಣದೊಳು ಶೋಭಿಸುತಿದ್ದವು ॥ ೨೦೫ ॥

ಅಂದು ಆ ದೇಶದೊಳಗೆ ಅನಾವೃಷ್ಟಿಯಾಗಿರಲು ।
ದಂಡಕೋಲು ತಿರುಗಿಸಿ ತೀರ್ಥವನ್ನೆ ಮಾಡಿದರು ॥ ೨೦೬ ॥

ಸುತ್ತಲಿದ್ದ ಬಾಲಕರೆಲ್ಲ ಒತ್ತಿ ಕಾಲುವೆಯ ಕಟ್ಟಿ ।
ಬತ್ತವನ್ನೆ ಬೆಳೆದರೀ ಚಿತ್ರಮಹಿಮರು ॥ ೨೦೭ ॥

ಅವತಾರತ್ರಯ ಮಧ್ವ ಸುವ್ವಾಲಿ

ಅಚ್ಯುತನ ಪಟ್ಟಣದೊಳಗೆ ಚಿತ್ರಭೂಸುರರು ।
ಎಲ್ಲ ಪರಿಪರಿ ಕ್ರೀಡೆಗಳ ಆಡುತಿದ್ದರು ॥ ೨೦೮ ॥

ಅಚ್ಯುತಪ್ರೇಕ್ಷಾಚಾರ್ಯರ ಚಿತ್ತ ನಿರ್ಮಲವ ಮಾಡಿ ।
ವಿಷ್ಣು ಸರ್ವೋತ್ತಮನೆಂಬ ಜ್ಞಾನ ತಿಳಿಸಿಕೊಟ್ಟರು ॥ ೨೦೯ ॥

ಗುರುಗಳ ಮನಸಿನ ಕಲ್ಮಷಂಗಳನೆ ಕಳೆದು ।
ಗೀತಾ ತಾತ್ಪರ್ಯಭಾಷ್ಯಮಾಡಿಕೊಟ್ಟರು ॥ ೨೧೦ ॥

ವ್ಯಾಖ್ಯಾನ ಕಾಲದಲ್ಲಿ ದೀಪ ಶಾಂತವಾಗಿರಲು
ಜ್ಯೋತಿ ನಿರ್ಮಾಣ ಮಾಡಿದರು ಅಂಗುಷ್ಠದಿಂದಲೆ ॥ ೨೧೧ ॥

ಶ್ರೀಮದಾಚಾರ್ಯರು ಸ್ನಾನಕ್ಕೆನುತ ಪೋಗಲು ।
ಹೋಗಿ ನಿಲ್ಲಿಸಿದ ಗಂಗೆ ಪವಿತ್ರಳಾದಳು ॥ ೨೧೨ ॥

ಮುನ್ನೂರು ಕೊಡ ಹಾಲು ಮೂರುಸಾವಿರ ಹಣ್ಣು ಮೆದ್ದು ।
ಜೀರ್ಣವನ್ನೆ ಮಾಡಿದರು ವಾಯುತನಯರು ॥ ೨೧೩ ॥

ಭಕ್ತಜನರ ಮನೆಯೊಳು ಲೆಕ್ಕವಿಲ್ಲದ ಹಣ್ಣುಮೆದ್ದು ।
ಭಿಕ್ಷೆಯನ್ನು ಕೊಂಡರಾ ಅಕ್ಷಯಾತ್ಮಕ ॥ ೨೧೪ ॥

ಕತ್ತಲೊಳಗೆ ಜಲವು ವಸ್ತ್ರ ತೋಯದ್ವಾಂಗ ಬರಲು ।
ಹರಿಯ ಶಿಷ್ಯರ ಕರೆಯ ಕಳಿಸಿದ ॥ ೨೧೫ ॥

ನಾವು ಇಲ್ಲದೆ ನೀವು ನದಿಯ ಹ್ಯಾಂಗ ದಾಟಿದಿರೆಂದು ।
ಸುತ್ತಲಿದ್ದ ದೂತರೆಲ್ಲ ಕೇಳುತಿದ್ದರು ॥ ೨೧೬ ॥

ಜಗವನ್ನೆಲ್ಲ ರಕ್ಷಿಸುವ ಶ್ರೀಹರಿಯು ನಮ್ಮ ರಕ್ಷಿಸುವ ।
ಅವರಿಗೆ ತಕ್ಕ ಮಾತನಾಡಿ ಮುಂದಕ್ಕೆ ನಡೆದರು ॥ ೨೧೭ ॥

ಕಳ್ಳರೆಲ್ಲ ಅಟ್ಟಿ ಬರಲು ಕಲ್ಲಾಗಿ ನಿಂತಿರಲು ।
ಕಲ್ಲು ಎಂದು ಕಳ್ಳರೆಲ್ಲ ತಿರುಗಿ ಹೋದರು ॥ ೨೧೮ ॥

ಅವತಾರತ್ರಯ ಮಧ್ವ ಸುವ್ವಾಲಿ

ಕಾವಿಯ ವಸ್ತ್ರವನ್ನು ಗಂಟುಕಟ್ಟಿ ಬಿಸುಡಲು ।
ತಮ್ಮ ತಮ್ಮೊಳಗೆ ಬಡಿದಾಡಿ ಮಡಿದರೆಲ್ಲರು ॥ ೨೧೯ ॥

ಕೇರಳ ದೇಶವ ತೋಡು ಹೋಗು ಎಂದರೆ ।
ತೋರ್ಸಿಕೊಟ್ರೆ ನಾ ತೋಡುವೆನೆಂದರು ॥ ೨೨೦ ॥

ತೋರಿಸಿಕೊಡುವೆನೆಂದು ಆಗ ಗುದ್ದಲಿಯ ಹಿಡಿದು ।
ತೋಡಿ ತೋಡಿದ್ಹಾಂಗ ನೆಟ್ಟನಾಗಿ ಹೋಯಿತು ॥ ೨೨೧ ॥

ಪಾಪಿ ಅಲ್ಲ ಕೋಪಿ ಅಲ್ಲ ಪಾಪಿ ಬೊಮ್ಮನೂ ಅಲ್ಲ ಎಂದು ।
ಮಾಯಾವಾದಿ ಮತವ ಮುರಿದು ಬಿಟ್ಟನು ॥ ೨೨೨ ॥

ಗಂಡು ಆಟ ಎಂಬುವನ ಗದೆಯಿಂದ ಸೀಳಿದರೆ ।
ತುಂಡುಮುಂಡಾಗಿ ಧರಣಿಮೇಲೆ ಬಿದ್ದಿತು ॥ ೨೨೩ ॥

ಕೊಕ್ಕಟಾ ದೇಶದೊಳಗೆ ಮುಪ್ಪಿನ ಬ್ರಾಹ್ಮಣಿರಲು ।
ಕೃಷ್ಣಮೂರ್ತಿ ಮಹಿರ್ಣ(?)ವನ್ನು ಮಾಡಿಸಿದನು ॥ ೨೨೪ ॥

ಜ್ಞಾನಬೋಧ ಎಂಬುವನ ದೂರಕ್ಕೆ ಓಡಿಸಿ ಶ್ರೀ ।
ಮನ್ನಾರಾಯಣನೆ ಪರದೇವತೆ ಎನುತ ನುಡಿದರು ॥ ೨೨೫ ॥

ಅಣುಮಾತ್ರದಿಂದಲ್ಲೆ ತ್ರೀಣುಮಾತ್ರ ಮಾಡಿ ಹಾರಿಸಿ ।
ಹುಡುಗನ್ನ ಹೆಗಲೇರಿ ದೇವಾಲಯಕ್ಕೆ ಬಂದರು ॥ ೨೨೬ ॥

ಶ್ರೀಮದಾಚಾರ್ಯರು ಅಷ್ಟಮಿಪರ್ಯಂತ ಎರಡು ।
ಮುಹೂರ್ತದೊಳಗೆ ಬದರಿಕಾಶ್ರಮಕ್ಕೆ ಬಂದರು ॥ ೨೨೭ ॥

ಬದರಿಕಾಶ್ರಮಕ್ಕೆ ಬಂದು ಬದರಿನಾರಾಯಣರ ।
ಪಾದದಾಮೇಲೆ ಬಿದ್ದು ಶಿಷ್ಯರಾದರು ॥ ೨೨೮ ॥

ವಾಯುದೇವರ ಮೂರವತಾರ ಹೇಳಿಕೇಳಿದವರಿಗೆ ।
ಸಾಯುಜ್ಯಮುಕ್ತಿ ಕೊಡುವ ಹಯವದನನು ॥ ೨೨೯ ॥

ಅವತಾರತ್ರಯ ಮಧ್ವ ಸುವ್ವಾಲಿ

ಸುವ್ವಿ ಹನುಮಂತ ಸುವ್ವಿ ಸುವ್ವಿ ಭೀಮಸೇನ ಸುವ್ವಿ ।
ಸುವ್ವಿ ಮಧ್ವರಾಯರಿಗೆ ಸುವ್ವಿಲಾಲಿ ॥ ೨೩೦ ॥